

(6ನೇ ಪುಟದಿಂದ)

ಅದೇ ವೇಳೆ ಹೂವಿನ ಪಲ್ಲಂಗ ಏರಿ ಕುಳಿತಂತೆ ಕಾಣುವ ಜೇನು ಮರಿಗಳು ಮತ್ತು ಕೀಟಗಳ ಸಾಮ್ರಾಜ್ಯ ಹೂವಿಗೆ ದೃಷ್ಟಿ ಬೊಟ್ಟು ಇಟ್ಟಂತೆ ಕಾಣುತ್ತದೆ. ಅಂತಹ ಸೊಬಗು ಈ ಜರ್ಸಿ ಮಲ್ಲಿಗೆ ಗಿಡದಲ್ಲಿದೆ.

ಸೋಲಿಗರ ನುಡಿಯಲ್ಲಿ 'ಗೆರ್ಸಿಮಲ್ಲಿಗೆ' ಎನ್ನಲಾಗುವ ಈ ಪುಷ್ಪ ಸುಂದರಿಯರನ್ನು ಬಿಳಿಗಿರಿರಂಗನ ಬೆಟ್ಟದ ಕೋರ್ ಅರಣ್ಯ ವಲಯದ ಹುಲಿ ಕಾಡಿನಲ್ಲಿ ಕಾಣಬಹುದು. 'ಆಸ್ಕಿಫಿಡೊಡೆ' (Asclepiadoideae) ಕುಟುಂಬಕ್ಕೆ ಸೇರಿದ ಇವು ಉತ್ತರ ಅಮೆರಿಕಾ ಮೂಲದವು.



ಇವು ಸುಮಾರು 2700 ಪ್ರಭೇದಗಳನ್ನು ಹೊಂದಿವೆ. ಬಿಳಿಗಿರಿಬೆಟ್ಟ ಅರಣ್ಯ ವಲಯದಲ್ಲಿ ಎರಡು ರೀತಿಯ ಪ್ರಭೇದಗಳು ಸಾಮಾನ್ಯವಾಗಿ ಕಂಡು ಬರುತ್ತವೆ.

ಮಕರಂದ ಅರಸುವ ಜೇನುಗಳನ್ನು ಆಕರ್ಷಿಸಲು ಇದರ ಪ್ರಭೇದವೊಂದು ರಾಜದ್ರವವನ್ನು ಹೂಗಳ ಮೇಲೆ ಹನಿಸುತ್ತದೆ. ಇದನ್ನು ಸಂಗ್ರಹಿಸಲು ಬರುವ ಜೇನುಗಳು ಪರಾಗಸ್ಪರ್ಶ ಕ್ರಿಯೆಗೆ ನೆರವಾಗುತ್ತವೆ.

ಲಾರ್ವ ಹಾಗೂ ಇರುವೆಗಳಿಗೆ ಇವು ಆಹಾರದ ಮೂಲ. ಎಕ್ಕದ ಎಲೆಗಳಂತೆ ಒರಟಾದ ಹತ್ತಾರು ಎಲೆಗಳು ಗಿಡದ ಸುತ್ತಲೂ ಇವೆ. ಹಣ್ಣಾದ ಎರಡು ಮುಳ್ಳು ಹೊದ್ದ ಕಾಯಿಗಳು ಒಣಗಿದಾಗ ಕೀಟಗಳು ಒಳ ಸೇರಿ ವಂಶಾಭಿವೃದ್ಧಿ ಮಾಡುತ್ತವೆ.

ವಿದೇಶದಲ್ಲಿ ಅಲಂಕಾರಿಕ ಪುಷ್ಪಗಳಾಗಿ ಇವುಗಳನ್ನು ಬೆಳೆಸಲಾಗುತ್ತದೆ. ಹಳದಿ ಇಲ್ಲವೇ ಕಿತ್ತಲೆ ಬಣ್ಣದ ಮೊಗ್ಗುಗಳ ಸಸ್ಯವರ್ಗವನ್ನು ಹೆಚ್ಚು ಕಾಣಬಹುದು. ಪೊದೆ ಇಲ್ಲವೆ ಬಳ್ಳಿ ಸಸ್ಯವಾಗಿಯೂ ಇದು ಹಬ್ಬುತ್ತವೆ. ರಕ್ತಬಣ್ಣದ ಹೂಗಳಿಗೆ ಬಹು ಬೇಡಿಕೆ ಇದೆ.

ಜನವರಿ– ಫೆಬ್ರವರಿ ವೇಳೆಗೆ ಅರಳುವ ಈ ಹೂವು ವಿದೇಶಿ ಮೂಲದ ಸಸ್ಯವರ್ಗ. ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಮಾತ್ರ ಬೆಳೆಯುತ್ತದೆ. ಆಯುರ್ವೇದದ ಪ್ರಕಾರ ಈ ಹೂಗಳು ಔಷಧೀಯ ಗುಣ ಹೊಂದಿವೆ.